


ಅವೆಲಾನ್ ಪಾರ್ಕ್‌ನ ದೃಶ್ಯ

ರಷ್ಯಾದಿಂದ ಓಡಿಬಂದು ಪೋಲೆಂಡಿನಲ್ಲಿ ಮನೆ ಮಾಡಿಕೊಂಡ ಯಹೂದಿಗಳಲ್ಲಿ ಒಬ್ಬನು... ಈ ಮುದುಕ ಮುದುಕಿಗೆ ಸಾಮ್ಯುಯೆಲ್ ಅಂತ ಒಬ್ಬ ಮಗ ಇದ್ದ. ಅವನು ನಲವತ್ತು ವರ್ಷದ ಹಿಂದೆ ಅಮೆರಿಕಕ್ಕೆ ಹೋಗಿದ್ದ. ಅವನು ಅಲ್ಲಿ ಮಿಲಿಯಗಟ್ಟಲೆ ಡಾಲರ್ ಸಂಪಾದಿಸಿದ್ದಾನೆ ಅನ್ನುವ ಮಾತು ಲೆನ್ಟ್‌ಶಿನ್ ಊರಿನಲ್ಲಿತ್ತು. ಪ್ರತಿ ತಿಂಗಳೂ ಮುದುಕ ಬೆರ್ಲ್‌ಗೆ ಲೆನ್ಟ್‌ಶಿನ್ ಅಂಚೆಯವನು ಮನಿ ಆರ್ಡರು ಮತ್ತೆ ಒಂದು ಕಾಗದ ತಂದುಕೊಡುತ್ತಿದ್ದ. ಕಾಗದವನ್ನು ಯಾರೂ ಓದುವುದಕ್ಕೆ ಆಗುತ್ತಿರಲಿಲ್ಲ. ಅದರ ತುಂಬ ಇಂಗ್ಲಿಷ್ ಪದಗಳೇ ಜಾಸ್ತಿ ಇರುತ್ತಿದ್ದವು...'

ಹೀಗೆ ಕಥೆ ಆರಂಭವಾಗಿ ಸಾಮ್ಯುಯೆಲ್ ಕಳುಹಿಸುತ್ತಿದ್ದ ಹಣದ ಬಗ್ಗೆ ಬೆರ್ಲ್‌ಗಾಗಲಿ ಊರಿನವರಿಗಾಗಲಿ ಯಾವ ಆಸಕ್ತಿಯೂ ಇರಲಿಲ್ಲ. ಯಾಕೆಂದರೆ, ಆ ಡಾಲರ್‌ಗಟ್ಟಲೆ ಹಣವನ್ನು ಖರ್ಚು ಮಾಡಲು ಹಳ್ಳಿಯಲ್ಲಿ ಅವಕಾಶವೇ ಇರಲಿಲ್ಲವಲ್ಲ! ಹಾಗಾಗಿ, ಸಿಂಗರ್ ಕಥೆಯನ್ನು ಹೇಗೆ ಕೊನೆಗಾಣಿಸುತ್ತಾನೆಂದರೆ ತಾನು ಕಳಿಸಿದ 'ಹಣ ಎಲ್ಲಿ ಇಟ್ಟೆ' ಎಂದು ಮಗ ಕೇಳಿದಾಗ ಬೆರ್ಲ್ ಇಲ್ಲೇ ಇದೆ ಎನ್ನುತ್ತಾನೆ. ಅಂದರೆ, ಅದು ಗುಡಿಸಲಲ್ಲೇ ಇದೆ. ಮಗ ಬ್ಯಾಂಕಿನಲ್ಲಿ ಇಡಲಿಲ್ಲವಾ ಅಂದರೆ 'ನಮ್ಮ ಲೆನ್ಟ್‌ಶಿನ್‌ನಲ್ಲಿ ಬ್ಯಾಂಕು ಇಲ್ಲ' ಎಂಬುದು ಅಪ್ಪನ ಉತ್ತರ. ಮಗ ಮತ್ತೆ ಎಲ್ಲಿಟ್ಟಿದ್ದೀಯಾ